

**ಎಸ್. ದಿವಾಕರ್**

ಒಂದಾನೊಂದು ಕಾಲದಲ್ಲಿ ಮಾ ಲಿಯಾಂಗ್ ಎಂಬ ಚೀನೀ ಚಿತ್ರಕಾರನೊಬ್ಬನಿದ್ದ. ಅವನು ಕಣ್ಣಿಗೆ ಕಂಡದ್ದೆಲ್ಲವನ್ನೂ ಅದೆಷ್ಟು ನಿಖರವಾಗಿ ಅನುಕರಿಸುತ್ತಿದ್ದನೆಂದರೆ ಅವನ ಕುಂಚದ ಒಂದೆರಡು ಗೆರೆಗಳಿಂದಲೇ ಪ್ರತಿಯೊಂದೂ ವಾಸ್ತವದ ಪ್ರತಿರೂಪವಾಗಿ ರೂಪಾಂತರಗೊಂಡುಬಿಡುತ್ತಿತ್ತು. ಒಮ್ಮೆ ಚಕ್ರಾಧಿಪತಿಯೊಬ್ಬ ಸಮುದ್ರವನ್ನು ಚಿತ್ರಿಸು ಎಂದು ಆಜ್ಞೆಯಿತ್ತದ್ದೇ ತಡ, ಮಾ ಲಿಯಾಂಗ್ ಚಿತ್ರಿಸಿದ ಸಮುದ್ರದಲ್ಲಿ ಆ ಚಕ್ರಾಧಿಪತಿ ತನ್ನ ಅರಮನೆಯ ಸಮೇತ ಮುಳುಗಿಹೋದ. ಮಾ ಲಿಯಾಂಗ್‌ನ ಇಂಥ ದಿವ್ಯಕಲೆಯನ್ನು ಮೀರಿಸಬೇಕೆಂದುಕೊಂಡ ಪಾಶ್ಚಾತ್ಯ ಜಗತ್ತು ಫೋಟೋಗ್ರಫಿಯನ್ನು ಕಂಡುಹಿಡಿಯಿತು.

ಆ ಫೋಟೋಗ್ರಫಿಯಲ್ಲಿ ಯುವಕರು ಸದಾ ಯುವಕರಾಗಿಯೇ ಇರುತ್ತಿದ್ದರು. ಸಾಯುತ್ತಿದ್ದವರು ಕೂಡ ಮತ್ತೆ ಮತ್ತೆ ತಮ್ಮ ಸಾವಿನ ಕ್ಷಣವನ್ನು ಪುನರಭಿನಯಿಸುತ್ತ ಬದುಕಿರುತ್ತಿದ್ದರು.

ಮೊನ್ನೆ ಏನಾಯಿತಪ್ಪಾ ಎಂದರೆ ಫೋಟೋಗ್ರಾಫರರೊಬ್ಬರು ಒಂದು ಸಭೆಯಲ್ಲಿ ಕ್ಯಾಮೆರಾ ಕೋನವನ್ನು, ಫಿಲ್ಮಿನ ಸ್ಪೀಡನ್ನು, ನೆರಳು ಬೆಳಕಿನ ವಿನ್ಯಾಸವನ್ನು ವಿವರಿಸುತ್ತಾ ಒಂದು ನಿರ್ದಿಷ್ಟ ವಿಚಾರದ ಪ್ರತಿಪಾದನೆಗಾಗಿ ತಾವು ತೆಗೆದ ಫೋಟೋಗಳ ಕಟ್ಟಿನಿಂದ ಒಂದು ಫೋಟೋವನ್ನು ಹೊರತೆಗೆದರು. ಅದು ಅವರು ತೆಗೆದ ಅವರದೇ ಮಗುವಿನ ಫೋಟೋ. ಅದೊಂದು ಹಸುಗೂಸು.

ತೊಟ್ಟಿಲಿನಲ್ಲಿ ಮಲಗಿ ಹಾಯಾಗಿ ನಿದ್ರಿಸುತ್ತಿದ್ದ ಮಗು ದುಂಡುದುಂಡಗಿತ್ತು. ಅದರ ಹಣೆಯ ಮೇಲೆ ನಾಲ್ಕಾರು ಕೂದಲು, ತುಟಿಯಲ್ಲಿ ಭಯ ಆತಂಕಗಳಿಲ್ಲದ, ನೆಮ್ಮದಿಯ ಸುಳಿನಗು. ಅದರ ಪುಟ್ಟ ಬಲಗೈ ಮಾತ್ರ ಮುಷ್ಟಿ ಬಿಗಿದುಕೊಂಡಿತ್ತು.

ಫೋಟೋ ತೆಗೆದಾಗ ಈ ಮಗುವಿಗೆ ನಾಲ್ಕೈದು ತಿಂಗಳಾಗಿತ್ತಷ್ಟೆ ಎಂದು ಹೇಳಿದ ಫೋಟೋಗ್ರಾಫರರು ಕಟ್ಟಿನಿಂದ ಹೊರಗೆಳೆದ ತಕ್ಷಣ ಸುರುಳಿ ಸುರುಳಿಯಾದ ಆ ಫೋಟೋವನ್ನು ಟೇಬಲ್ಲಿನ ಮೇಲಿಟ್ಟು ತಡವಿದರು; ಅದರ ಅಂಚುಗಳನ್ನು ಹಿಡಿದುಕೊಂಡು ಹಿಮ್ಮುಖವಾಗಿ ಸುರುಳಿ ಸುತ್ತಿದರು; ಮತ್ತೆ ಮೊದಲಿನಂತೆಯೇ ಸುರುಳಿಯಾದದ್ದನ್ನು ಬಿಡಿಸಿ ತಮ್ಮ ಅಂಗೈಯಿಂದ ಮೃದುವಾಗಿ ಉಜ್ಜಿದರು. ಕಡೆಗೆ ಏನು ಮಾಡಿದರೂ ಸಪಾಟಾಗದಿದ್ದ ಆ ಫೋಟೋ ಗಾಳಿಗೆ ಹಾರಿಹೋದೀತೆಂಬ ಆತಂಕದಿಂದಲೋ ಏನೊ, ತಾವು ಅರ್ಧ ಕುಡಿದಿದ್ದ ನೀರಿನ ಗ್ಲಾಸನ್ನು ಅದರ ಮೇಲಿಟ್ಟರು.

ಅದನ್ನೆಲ್ಲ ನೋಡುತ್ತಿದ್ದ ಅವರ ಹೆಂಡತಿ ತಮ್ಮ ಮುಖದಲ್ಲಿ ಅತೀವ ವೇದನೆಯನ್ನು ತುಳುಕಿಸುತ್ತಾ, “ಅಯ್ಯೋ, ಹಾಗ್ಯಾಕೆ ಸುತ್ತಿ, ತಡವಿ, ಉಜ್ಜಿ ಮಾಡತೀರಿ... ಅವನು ನನ್ನ ಮಗ” ಎಂದರು.

ಅವರ ಆ ಮಗನೂ ಸಭೆಯಲ್ಲಿದ್ದ. ಅವನಿಗೆ ಮದುವೆಯಾಗುವ ವಯಸ್ಸು, ಮಕ್ಕಳಾಗುವ ವಯಸ್ಸು.

ನಡೆದಾಡುವ ವಿಶ್ವ ಕಥಾಕೋಶ ಎಂದೇ ಕರೆಯಬಹುದಾದ ದಿವಾಕರ್ ಜಾಗತಿಕ ಸಾಹಿತ್ಯದ ಅಪಾರ ಓದನ್ನು ಮಾಡಿದ್ದಾರೆ. ಅವರು ಮುಖ್ಯವಾಗಿ ಕತೆಗಾರ, ಪ್ರಬಂಧಕಾರ, ಅನುವಾದಕ. ಕೆಲಕಾಲ ಪತ್ರಕರ್ತರಾಗಿದ್ದರು.